ಟಿ.ಎಸ್. ನಾಗಾಭರಣ
ಅಧ್ಯಕ್ಷರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಸಂ.ಕಅಪ್ರಾ/ಅ/ ೫೪೭ /೨೦೨೧ ದಿನಾಂಕ: ೦೧-೦೧-೨೦೨೧

ಮಾನ್ಯರೆ,

ಆತ್ಮೀಯ ಕನ್ನಡ ಸಹೃದಯ ಮನಸ್ಸುಗಳಿಗೆ ಕನ್ನಡ ಕಾಯಕ ವರ್ಷಾಚರಣೆಯ ಹಾಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ಕನ್ನಡ ಭಾಷೆಯನ್ನು ರಾಜ್ಯದ ಆಡಳಿತದ ಎಲ್ಲ ಮಟ್ಟದಲ್ಲಿ ಅನುಷ್ಠಾನವಾಗುತ್ತಿರುವುದರ ಪರಿಶೀಲನೆಯೂ ಸೇರಿದಂತೆ ಕನ್ನಡ ಭಾಷೆ ಮತ್ತು ಕನ್ನಡ ಜನರ ಹಿತಾಸಕ್ತಿಯನ್ನು ಕಾನೂನಿನ್ವಯ ಸಂರಕ್ಷಿಸುವ ಸಲುವಾಗಿ ರಾಜ್ಯ ಶಾಸನದ ಮೂಲಕ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿರುತ್ತದೆ.

ಕನ್ನಡ ನಾಡು-ನುಡಿ, ಸಂಸ್ಕೃತಿ ಪ್ರಚಾರ, ಹಿತರಕ್ಷಣೆ ಹಾಗೂ ಕನ್ನಡವನ್ನು ಸಾರ್ವತ್ರಿಕವಾಗಿ ಬಳಕೆ ಭಾಷೆಯನ್ನಾಗಿಸುವ ಪ್ರಯತ್ನವನ್ನು ಸರ್ಕಾರ ಮೊದಲಿನಿಂದಲೂ ನಡೆಸಿಕೊಂಡು ಬಂದಿದೆ. ಅದನ್ನು ಇನ್ನೂ ಹೆಚ್ಚು ವ್ಯವಸ್ಥಿತವಾಗಿಸಲು ಸರ್ಕಾರ ರೂಪಿಸಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಆ ನಿಟ್ಟಿನಲ್ಲಿ ಹಲವು ಚಟುವಟಿಕೆಗಳನ್ನು ನಡೆಸುತ್ತಿದೆ. ರಾಷ್ಟ್ರದ ಸಂವಿಧಾನವು ಮಾನ್ಯ ಮಾಡಿದಂತೆ ಭಾಷಾನ್ವಯ ರಾಜ್ಯಗಳ ರಚನೆಯ ಆಶಯವೇ ಸ್ಥಳೀಯ ಭಾಷೆಯ ಆಡಳಿತ, ಶಿಕ್ಷಣ ಮತ್ತು ಉದ್ಯೋಗ ರಂಗದಲ್ಲಿ ಆದ್ಯತೆ ಪಡೆಯಬೇಕೆಂಬುದೇ ಆಗಿದೆ.

ಈ ನಿಟ್ಟಿನಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಆಡಳಿತದಲ್ಲಿ ಕನ್ನಡ, ಶಿಕ್ಷಣದಲ್ಲಿ ಕನ್ನಡ, ಉದ್ಯೋಗದಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯತೆ, ಹೊರದೇಶದಲ್ಲಿ ಕನ್ನಡ, ತಂತ್ರಜ್ಞಾನದಲ್ಲಿ ಕನ್ನಡ ಮತ್ತು ಸಾರ್ವಜನಿಕವಾಗಿ ಎಲ್ಲೆಡೆ ಕನ್ನಡ ಬಳಕೆ ಎಂಬ ಉಪ ಶೀರ್ಷಿಕೆಗಳಡಿಯಲ್ಲಿ ಕಾರ್ಯೋನ್ಮುಖವಾಗಿರುತ್ತದೆ. ಕನ್ನಡವನ್ನು ನಮ್ಮ ಉಸಿರ ಭಾಷೆಯಾಗಿಸುವ ನಿಟ್ಟಿನಲ್ಲಿ ಸಾಧಿಸಬಹುದಾದ ಹಾಗೂ ಕ್ರಮಿಸಬಹುದಾದ ಎಲ್ಲಾ ದಾರಿಗಳನ್ನು ತನಗೆ ಪ್ರದತ್ತವಾದ ಅಧಿಕಾರದನ್ವಯ ಕ್ರಮಿಸುತ್ತಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರ ೨೦೨೦-೨೧ನ್ನು ಕನ್ನಡ ಕಾಯಕ ವರ್ಷಾಚರಣೆ ಎಂದು ಘೋಷಿಸಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕನ್ನಡಪರ ಚಟುವಟಿಕೆಗಳನ್ನು ಸಮರೋಪಾದಿಯಲ್ಲಿ ಹಮ್ಮಿಕೊಳ್ಳುವಂತೆ ನಿರ್ದೇಶಿಸಿ, ಈಗಾಗಲೇ ಪತ್ರ ಬರೆದಿರುತ್ತದೆ. ೨೦೨೧ನೇ ವರ್ಷ ಕನ್ನಡದ ಮೇಲಿನ ತಮ್ಮ ಕಾಳಜಿಪೂರ್ವಕ ಆಡಳಿತವನ್ನು ಸೂಚಿಸುವಂತಾಗಲಿ. ಅಖಂಡ ಕನ್ನಡ ಮನಸ್ಸುಗಳ ಪರವಾಗಿ ತಮ್ಮನ್ನು ಆಡಳಿತ ಕನ್ನಡ ವರ್ಷಕ್ಕೆ ಸ್ವಾಗತಿಸುತ್ತಾ, ತಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಆಡಳಿತ ವ್ಯವಸ್ಥೆಯಲ್ಲಿ ಕನ್ನಡ ಕಟ್ಟುನಿಟ್ಟಾಗಿ ಜಾರಿಗೊಳ್ಳಲಿ ಎಂದು ಆಶಿಸುತ್ತೇನೆ. ತಮ್ಮ ಕ್ರಮ ಉಳಿದವರಿಗೆ ಮಾದರಿಯಾಗಲಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಟಿ ಎಸ್ ನಾಗಾಭರಣ)

Vice-Chancellor's Personal Section
To No. 652
Date 18/01/2021

ಗೆ,

ಎಲ್ಲಾ ವಿಶ್ವವಿದ್ಯಾಲಯಗಳ ಮಾನ್ಯ ಕುಲಪತಿಗಳಿಗೆ ಹಾಗೂ ಕುಲಸಚಿವರುಗಳಿಗೆ (ಆಡಳಿತ).

19 JAN 2021
Registrar's Personal Section
To No. 453
Date 18/1/2021
Website